O.S 144/2022
PW-1

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು. ದಿನಾಂಕಃ 30/07/2026

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀಎ ಎಸ್ ವಕೀಲರಿಂದಃ**

8. ದಾವಾ ಆಸ್ತಿಯಲ್ಲಿ ಒಟ್ಟು 1 ಎಕರೆ 16 ಗುಂಟೆ ಜಮೀನು ಇದೆ. ಸರ್ವೇ ನಂ 64 ರಲ್ಲಿ ಒಟ್ಟು ಎಷ್ಟು ಪೋಡು ಇದೆ ಎಂದು ನನಗೆ ಗೊತ್ತಿಲ್ಲ. ನನ್ನ ಸರ್ವೇ ನಂ 64/7 ಆಗಿರುವುದರಿಂದ ನನಗೆ ಅದರಲ್ಲಿ 1-6 ಇರುವ ಪೋಡುಗಳ ಬಗ್ಗೆ ಗೊತ್ತು ಎಂದರೆ ಸರಿ . ಅವುಗಳಲ್ಲಿ ಎಷ್ಟು ಹಿಸ್ಸೆ ಇದೆ ಮತ್ತು ಯಾರ ಹೆಸರಿಗೆ ಪಹಣಿ ಇದೆ ಎಂದು ನನಗೆ ಗೊತ್ತಿಲ್ಲ.

9. ದಾವಾ ಅಂಶಗಳು ನನಗೆ ತಿಳಿದಿದೆ. ಅದರಲ್ಲಿ 2ನೇ ಪುಟದ 2ನೇ ಖಂಡಿಕೆಯ 7 ನೇ ಸಾಲಿನಲ್ಲಿರುವಂತೆ ಪ್ರತಿವಾದಿ ತಂದೆ ಮೋಸದಿಂದ ಖಾತೆ ಮಾಡಿಸಿಕೊಂಡಿದ್ದಾರೆ ಮತ್ತು ವಾದಿಯರಾಗಲಿ ಅಥವಾ ತಂದೆ ತಾತಾ ದಾವಾ ಆಸ್ತಿಯನ್ನು ಮಾರಾಟ ಮಾಡಿಲ್ಲ ಎಂದು ಬರೆಸಿರುವ ಕಾರಣ ಏನು ಎನ್ನಲಾಗಿ ಸಾಕ್ಷಿಯು ತಾವು ಯಾವುದೇ ಆಸ್ತಿ ಮಾರಾಟ ಮಾಡದೆ ಇರುವುದು ಎನ್ನುತ್ತಾರೆ. ದಾವಾ ಆಸ್ತಿಯ ಋಣ ಭಾರ ಪ್ರಮಾಣ ಪತ್ರ ಪಡೆದಿಲ್ಲ. ಆರ್ ಟಿ ಸಿ ಪಡೆದಿದ್ದೇನೆ.

10. ಪುಟ್ಟಯ್ಯನ ಹೆಂಡತಿ ಕಾಳಮ್ಮ ನನ್ನ ಅಜ್ಜಿ . ಪುಟ್ಟಯ್ಯನ ಮಗ ಬೀರೆ ಗೌಡ ಎಂದರೆ ಸರಿ . ಬೀರೆಗೌಡ ಅಲಿಯಾಸ್ ಉಳೀಗೌಡರವರ ಮಗ ಪುಟ್ಟೇಗೌಡರನ್ನು ನಾನು ನೋಡಿದ್ದೇನೆ. ಅವರು ದಿನಾಂಕ 19/05/1958 ರಲ್ಲಿ ಸರ್ವೇ ನಂ 64 ರ 1 ಎಕರೆ 16 ಗುಂಟೆಯನ್ನು ನೋಂದಾಯಿತ ಕ್ರಯ ಪತ್ರದ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಕ್ರಯದ ವಿಚಾರ ನಾನು ಉಪನೋದಣಾಧಿಕಾರಿಗಳ ಕಛೇರಿಗೆ ಹೋಗಿ ದಾಖಲೆಗಳನ್ನು ನೋಡಿದಾಗ ನನಗೆ ತಿಳಿದಿತ್ತು ಎಂದರೆ ಸರಿಯಲ್ಲ. ಈ ದಾವೆಯ ಸಮಯದಲ್ಲಿ ಅರ್ಜಿ ನೀಡಿ ಆರ್ ಟಿ ಸಿ ಮತ್ತು ಇ ಸಿ ಪಡೆದಿದ್ದೆ ಎಂದರೆ ಸರಿ . ನಾನು ಸದರಿ ದಾಖಲೆಗಳನ್ನು ನೋಡಿದ ನಂತರ ನನ್ನ ಪೂರ್ವಜರು ದಾವಾ ಆಸ್ತಿಯನ್ನು ಮಾರಾಟ ಮಾಡಿರುವ ಅಂಶ ನನಗೆ ತಿಳಿಯಿತು ಎಂದರೆ ಸರಿ . ಅದು ತಿಳಿದ ನಂತರವೇ ಮೇಲೆ ಹೇಳಿದಂತೆ ನನ್ನ ದಾವೆಯಲ್ಲಿ ನನ್ನ ತಂದೆ ತಾಯಿ ದಾವಾ ಆಸ್ತಿಯನ್ನು ಮಾರಾಟ ಮಾಡಿಲ್ಲ ಎಂದು ಸುಳ್ಳು ಅಂಶವನ್ನು ಬರೆಸಿದ್ದೇನೆ ಎಂದರೆ ಸರಿಯಲ್ಲ. ಅದೇ ಕಾರಣಕ್ಕೆ ಇ ಸಿ ಮತ್ತು ಇನ್ನಿತರ ದಾಖಲಾತಿಗಳುನ್ನು ಹಾಜರಿಸದೆ ಈ ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ.

11. ನಾನು 1969 ರಲ್ಲಿ ಜನಿಸಿದ್ದೇನೆ ಎಂದರೆ ಸರಿ . ನಮಗೆ ದಾವಾ ಆಸ್ತಿ ಬಿಟ್ಟು ಇನ್ನು 6 ಎಕರೆ ಜಮೀನು ಇದೆ. ಆ ಆಸ್ತಿಗಳನ್ನು ನಾವು ವಿಭಾಗ ಮಾಡಿಕೊಂಡಿಲ್ಲ . ನನ್ನ ತಂದೆ ತೀರಿಕೊಂಡು ಇಂದಿಗೆ 16 ವರ್ಷ ವಾಯಿತು. ಅವರ ಮರಣಾನಂತರ ಅವರ ಹೆಸರಿನಲ್ಲಿದ್ದ ಆಸ್ತಿಗಳ ದಾಖಲೆಗಳನ್ನು ನಾನು ನೋಡಿದ್ದೇನೆ. ಅದರಂತೆ ಅದೇ ಸಮಯದಲ್ಲಿ ದಾವಾ ಆಸ್ತಿ ದಾಖಲೆಯನ್ನು ಸಹ ನೋಡಿದ್ದೇನೆ. ಆ ಸಮಯದಲ್ಲಿ ದಾವಾ ಆಸ್ತಿ ಬೇರೆಯವರ ಹೆಸರಿನಲ್ಲಿ ಇರುವ ಅಂಶ ನನ್ನ ಗಮನಕ್ಕೆ ಬಂದಿತ್ತು ಎಂದರೆ ಸರಿಯಲ್ಲ. ನಾನು ನಮ್ಮ ತಂದೆ ತೀರಿಕೊಂಡ ನಂತರ ಆಸ್ತಿಗಳ ಪಹಣಿಯನ್ನು ಪಡೆದಿಲ್ಲ. ನಿಜಾಂಶ ತಿಳಿಯುತ್ತದೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹುಟ್ಟುವ 10 ವರ್ಷಗಳ ತಂದೆ ಮತ್ತು ಅಜ್ಜಿ ದಾವಾ ಆಸ್ತಿಯನ್ನು ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ಮಾರಾಟವಾದ

ನಂತರದಿಂದ ಪಹಣಿಯು ಕ್ರಯ ಮಾಡಿಕೊಂಡ ವ್ಯಕ್ತಿಗಳ ಹೆಸರಿನಲ್ಲಿ ಬರುತ್ತಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಾನು ಸ್ವಾದೀನದಲ್ಲಿಲ್ಲ ಹಾಗೂ ಅದರ ಮೇಲೆ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

12. ನಾನು 10ನೇ ತರಗತಿ ಓದಿದ್ದು ಕನ್ನಡ ಓದಲು ಬರುತ್ತದೆ. ನಾನು ದಾವೆ ಹಾಕುವ ಸಂದರ್ಭದಲ್ಲಿ ದಾವೆಯ ದಾಖಲಾತಿಗಳನ್ನು ಓದಿದ್ದೇನೆ. ನಿಪಿ 1 ರಲ್ಲಿ ಮಾರಾಟವಾಗಿರುವ ಅಂಶದ ಬಗ್ಗೆ ನಾನು ನೋಡಿರುತ್ತೇನೆ. ನಂತರ ನಾನು ಸದರಿ ಕ್ರಯಪತ್ರವನ್ನು ನೋಡಿ ಅದನ್ನು ವಕೀಲರಿಗೆ ತೋರಿಸಿದ್ದೆ ಎಂದರೆ ಸರಿ . ನಿಸಿ ನ6 ರಲ್ಲಿ ನಮೂದಾಗಿರುವ ಅಂಶವನ್ನು ನಾನು ಓದಿದ್ದೇನೆ. ನಾನು ಹಾಜರಿಸಿರುವ ದಾಖಲಾತಿಗಳನ್ನು ದಾವೆ ಹೂಡುವ ಸಮಯದಲ್ಲಿ ಪಡೆದಿದ್ದೆ . ನಿಸಿನ 3 ರಿಂದ 6 ಗಳನ್ನು 2002 ರಲ್ಲಿ ನಾನು ಪಡೆದಿದ್ದೆ ಎಂದರೆ ಸರಿ . ನನಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕಿಲ್ಲ, ನಾನು ಅಲ್ಲಿ ಸ್ವಾಧೀನದಲಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲು ಮುಕ್ತಾಯ

**<u>ಮರುವಿಚಾರಣೆಃ ಇಲ್ಲ</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ**

**1ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಮ್ ಎಫ್ ಸಿ,**

**ಹೊಳೆನರಸೀಪುರ**